**ಸಾಕ್ಷಿಯನ್ನು ದಿಃ17.02.2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಬರೆದ ವಿಳಾಸದಲ್ಲಿ ನೀವು ಹುಟ್ಟಿದಾಗಿನಿಂದಲೂ ಇದ್ದೀರಾ ಎಂದರೆ, ತಿರುಮಲಾಪುರದಲ್ಲಿ ಇದ್ದೇನೆ. ಇತ್ತೀಚಿಗೆ ಕುಶಾಲನಗರಕ್ಕೆ ಹೋಗಿದ್ದೇನೆ. ಆ ಬಗ್ಗೆ ದಾಖಲೆ ಇದೆ. ಅದನ್ನು ವಕೀಲರಿಗೆ ಕೊಟ್ಟಿಲ್ಲ.
2. ನನಗೆ 3 ಜನ ಮಕ್ಕಳು. ದೊಡ್ಡಮಗ 10 ನೇ ತರಗತಿ ತಿರುಮಲಾಪುರದಲ್ಲಿ ಓದಿದ್ದಾರೆ. ಆ ಬಗ್ಗೆ ದಾಖಲೆ ಇದೆ.
3. ನೀವು ಮುಂಚೆ ತಿರುಮಲಾಪುರದಲ್ಲಿ ವಾಸವಿದ್ದ ಬಗ್ಗೆ ಹಾಗೂ ಈಗ ಕಡ್ಲೂರಲ್ಲಿ ವಾಸವಿದ್ದ ಬಗ್ಗೆ ವಕೀಲರಿಗೆ ಹೇಳಿದ್ದೇನೆ.
4. ಪ್ರತಿವಾದಿ ನನ್ನ ಚಿಕ್ಕಮ್ಮ.
5. ತಿರುಮಲಾಪುರದಲ್ಲಿ ನನಗೆ ಜಮೀನು ಇಲ್ಲ. ಕುಡ್ಲೂರಲ್ಲಿ ಸಹ ಜಮೀನು ಇಲ್ಲ. ಮನೆ ಇದೆ. ಸದರಿ ಮನೆ 20 ವರ್ಷದಿಂದ ಇದೆ. ಅದು ನನ್ನ ತಂದೆ ಹೆಸರಿನಲ್ಲಿ ಇದೆ.
6. ನನ್ನ ತಂದೆ ಹಾಗೂ ನಾನು ಜೊತೆಯಲ್ಲಿ ವಾಸವಿದ್ದೇವೆ ಎಂದರೆ ಸರಿ.
7. ದಾವಾ ಆಸ್ತಿಯ ಚಕ್ಕುಬಂದಿ ಗೊತ್ತು. ಪೂರ್ವಕ್ಕೆಃ ಪ್ರೇಮಮ್ಮನ ಜಮೀನು, ಪಶ್ಚಿಮಕ್ಕೆ ಹಾಗೂ ಉತ್ತರಕ್ಕೇ ರಸ್ತೆ, ದಕ್ಷಿಣಕ್ಕೆ ಮಹಾದೇವಪ್ಪನವರ ಜಮೀನು. ಮಹಾದೇವಪ್ಪನ ಪೂರ್ವಕ್ಕೆಃ ಮಂಜುಳಮ್ಮನ ಜಮೀನು, ಪಶ್ಚಿಮಕ್ಕೆಃ ಮಹಾದೇವಪ್ಪನ ಜಮೀನು, ಉತ್ತರಕ್ಕೆಃ ರುದ್ರಪ್ಪನವರ ಜಮೀನು ಹಾಗೂ ದಕ್ಷಿಣಕ್ಕೆ ರುದ್ರಸ್ವಾಮಿ ರವರ ಜಮೀನು.
8. ವಾದಿ 1 ಎಕರೆ 20 ಗುಂಟೆಯಲ್ಲಿ ಸ್ವಾಧೀನದಲ್ಲಿ ಇದ್ದಾರೆ.
9. ಮಂಜುಳಾ ರವರ ಜಮೀನಿನ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆಃ ಮಹಾದೇಮ್ಮನ ಜಮೀನು ಉತ್ತರಕ್ಕೆಃ ರುದ್ರಸ್ವಾಮಿ ರವರ ಜಮೀನು ಹಾಗೂ ದಕ್ಷಿಣಕ್ಕೆ ಮಂಜುನಾಯ್ಕರ ಜಮೀನು.
10. ಮಹಾದೇಮ್ಮ ಹಾಗೂ ಮಂಜುಳಾ ರವರ ಜಮೀನು ತಾಗಿಕೊಂಡಂತೆ ಇದೆ ಎಂದರೆ ಸರಿ. ಸದರಿಯವರ ಜಮೀನಿನ ಪಕ್ಕದಲ್ಲಿ ತಿರುಮಲಾಪುರದಿಂದ ಬೈಲಕುಪ್ಪೆಗೆ ಹೋಗುವ ರಸ್ತೆ ಇದೆ.

11. ವಾದಿಯ ಜಮೀನಿನಲ್ಲಿ ಖರಾಬು ಇದೆ ಎಂದು ಬರೆಸಿದ್ದೇನೆ. ಆ ಬಗ್ಗೆ ಸರ್ವೆ ದಾಖಲಾತಿ ನೋಡಿದ್ದೆನೆ. 3-4 ತಿಂಗಳಲ್ಲಿ ಸರ್ವೆ ಆಗಿದ್ದು, ಅದರಲ್ಲಿ 5 ಗುಂಟೆ ಖರಾಬು ಇದೆ. ಅದನ್ನು ವಕೀಲರಿಗೆ ಕೊಟ್ಟಿದ್ದೇವೆ.

12. ನಾನು 7 ನೇ ತರಗತಿವರೆಗೆ ಓದಿದ್ದೇನೆ. ಪುಟ್ಟತಾಯಮ್ಮನಿಗೆ ನಿಪಿ - 2 ರ ಪಹಣಿಯಲ್ಲಿ ಖರಾಬು ಎಂದು ನಮೂದು ಇಲ್ಲ ಎಂದರೆ, ಸರಿ.

13. ನೀವು, ಮಂಜುಳಾ ಹಾಗೂ ಪ್ರತಿವಾದಿ ಸೇರಿಕೊಂಡು ವಾದಿಯ ಜಮೀನಿಗೆ ತೊಂದರೆ ಕೊಟ್ಟು ಅವರ ಜಾಗದಲ್ಲಿ ರಸ್ತೆ ಮಾಡಬೇಕು ಎಂದು ತೊಂದರೆ ಕೊಟ್ಟಿದ್ದೀರಾ ಎಂದರೆ ಸರಿಯಲ್ಲ.

14. ನೀವು ಖಾಯಂ ಕೂಡ್ಲೂರು ನಿವಾಸಿಯಾಗಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

15. ನೀವು ದಾವಾ ಆಸ್ತಿಯನ್ನು ನೋಡದೇ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

16. ಖರಾಬು ಒತ್ತುವರಿಯಾದ ಬಗ್ಗೆ ದಾಖಲೆ ನೋಡಿದ್ದೀರಾ ಎಂದರೆ, ಬೇಲಿ ಹಾಕಿದ್ದಾರೆ. 30 ವರ್ಷದಿಂದ ಒತ್ತುವರಿ ಮಾಡಿಕೊಂಡಿದ್ದಾರೆ. 5 ವರ್ಷದಿಂದ ಬೇಲಿ ಹಾಕಿಕೊಂಡಿದ್ದಾರೆ. ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ